ಮಾಡುತ್ತಿದ್ದೆವು. ಹಾಗಾಗಿ ನಾನು ಬೇಗ ಹೋಗಿ ತಡವಾಗಿ ಮನೆಗೆ ಬರುತ್ತಿದ್ದೆ.'

'ನನಗದೆಲ್ಲ ಅಭ್ಯಾಸವಾಗಿ ಹೋಗಿದೆ, ಮುಂದೆ ಹೇಳು' ವಿದ್ಯಾ ಅಸಲು ಮಾತನ್ನು ಕೇಳುವ ಆಸಕ್ತಿ ತೋರಿದಳು.

'ಈ ನಮ್ಮ ಪ್ರಯೋಗ ಬಹಳ ಮಹತ್ವದ್ದಾಗಿತ್ತು. ಸಾತ್ವಿಕ ನಮ್ಮ ಬಯೋಟೆಕ್ನಾಲಾಜಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾನೆ ಅನ್ನುವುದು ನಿನಗೆ ಗೊತ್ತೇ ಇದೆ. ಬಯೋಟೆಕ್ನಾಲಾಜಿಯ ಹೊಸ ಸಂಶೋಧನೆ 'ಟಿಶ್ಯೂ ಕಲ್ಚರ್'ನಲ್ಲಿ ನಡೆದಿದೆ. ನಮ್ಮ ಶರೀರ ಸಣ್ಣ ಸಣ್ಣ ಜೀವಕೋಶಗಳಿಂದ ತಯಾರಿಸಲ್ಪಟ್ಟಿದೆ. ಈ ಜೀವಕೋಶಗಳು ಕೆಲವು ವಿಶೇಷ ಕೆಲಸಗಳಿಗಾಗಿ ತಮ್ಮಲ್ಲಿ ಬದಲಾವಣೆ ಮಾಡಿಕೊಳ್ಳುತ್ತವೆ ಹಾಗೂ ಅವು ತಮ್ಮದೇ ಒಂದು ಗುಂಪು ಮಾಡಿಕೊಳ್ಳುತ್ತವೆ. ಅವುಗಳನ್ನು ಟಿಶ್ಯೂ ಇಲ್ಲವೆ ಅಂಗಾಂಶಗಳು ಅನ್ನುತ್ತೇವೆ. ಅದರಲ್ಲಿಯ ಕೆಲವು ಗುಂಪುಗಳು ಸ್ನಾಯುಗಳಾಗಿಯೂ ಕೆಲವು ಮೂಳೆಗಳ ಬೆಳವಣಿಗೆಯಲ್ಲಿ, ಕೆಲವು ಅಸ್ಥಿಮಜ್ಜೆಗಳ ಬೆಳವಣಿಗೆಯಲ್ಲಿ ತೊಡಗುತ್ತವೆ. ಗಿಡಮರಗಳಲ್ಲಿ ಹಾಗೂ ಪ್ರಾಣಿಗಳಲ್ಲಿ ಟಿಶ್ಯೂಕಲ್ಚರ್‌ನ ಸಹಾಯದಿಂದ ಅಮೂಲಾಗ್ರ ಕ್ರಾಂತಿಯಾಗಿದೆ. ವಿಶೇಷವಾಗಿ ಗೊಬ್ಬರ ತಯಾರಿಕೆಯಲ್ಲಿ ರಾಸಾಯನಿಕಗಳನ್ನು ತಯಾರಿಸುವುದರಲ್ಲಿ ಹಾಗೂ ವನಸ್ಪತಿಗಳ ಬೇರೆಬೇರೆ ಭಾಗಗಳ ಅಂಗಾಂಶಗಳನ್ನು ಕೃತಕವಾಗಿ ಪ್ರಯೋಗಶಾಲೆಯಲ್ಲಿ ಬೆಳೆಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಹೊಸ ಪದ್ಧತಿಯ ಬೀಜಗಳು ಅಥವಾ ಕೃತಕ ಮೀನು ಸಾಕಾಣಿಕೆಯಲ್ಲಿ ಈ ತಂತ್ರಜ್ಞಾನವನ್ನು ಉಪಯೋಗಿಸಿ ಉತ್ಪಾದನೆಯನ್ನು ಹೆಚ್ಚಿಸಬಹುದು.'

ಅವನ ಇಂತಹ ಮಾತಿನಿಂದ ಆಕಳಿಸಿದ ವಿದ್ಯಾ ಮುಂದಿನ ಮಾತು ಕೇಳಿ ಮಾತ್ರ ಹೌಹಾರಿದಳು.

ಈಗ ಸಾತ್ವಿಕ್ ಮಾನವನ ಅಂಗಾಂಶಗಳನ್ನು ಪ್ರಯೊಗಾಲಯದಲ್ಲಿ ತಯಾರಿಸಬಹುದೆ? ಎಂಬುದರ ಬಗ್ಗೆ ಸಂಶೋಧನೆ ನಡೆಸಿದ್ದಾನೆ. ಅದರಲ್ಲಿ ಅವನಿಗೆ ತಕ್ಕ ಮಟ್ಟಿಗೆ ಯಶಸ್ಸು ಸಿಕ್ಕಿದೆ. ಹಲ್ಲಿಯ ಬಾಲ ತುಂಡಾದರೆ ಆ ಜಾಗದಲ್ಲಿ ಹೊಸ ಬಾಲ ತಂತಾನೆ ಬೆಳೆಯಲಾರಂಭಿಸುತ್ತದೆ ಏಕೆಂದರೆ ಆ ಜಾಗದ ಅಂಗಾಂಶಗಳು ಅಲ್ಲಿ ನೈಸರ್ಗಿಕವಾಗಿ ಬೆಳೆಯಲಾರಂಭಿಸುತ್ತವೆ. ಮಾನವನ ಅವಯವಗಳಲ್ಲೂ ಹಾಗಾಗಬೇಕು ಅನ್ನುವುದೇ ಈ ಸಂಶೋಧನೆಯ ಉದ್ದೇಶ.

'ಆದರೆ, ನೀವು ಇದನ್ನೆಲ್ಲ ನನಗೆ ಈಗ್ಯಾಕೆ ಹೇಳುತ್ತಿದ್ದೀರಿ?'

'ಒಂದು ತಿಂಗಳ ಹಿಂದೆ ಮೀತಾ ಲೋಲಗೆಕರ್ ಅಪಘಾತಕ್ಕೀಡಾಗಿ ಕೋಮಾದಲ್ಲಿದ್ದಾಗ ನೀನೇ ಅಲ್ಲವೆ ಹೇಳಿದ್ದು, 'ಇನ್ನೂ ಐವತ್ತು ವರ್ಷಗಳ ನಂತರ ಗಾಯಕರ ಸ್ವರಯಂತ್ರವನ್ನು ಜೋಪಾನ ಮಾಡಿಡುವಷ್ಟು ವಿಜ್ಞಾನ ಮುಂದುವರೆಯುತ್ತದೆ ಎಂದು?'

'ಅಯ್ಯೋ ದೇವರೆ? ನೀವು ಏನು ಹೇಳೊದಕ್ಕೆ ಪ್ರಯತ್ನಿಸುತ್ತಿದ್ದೀರಾ?'

'ನಿನ್ನ ಮಾತು ಕೇಳಿದ ಕೂಡಲೆ ನಾನು ಸಾತ್ವಿಕ್‌ಗೆ ಫೋನ್ ಮಾಡಿದೆ. ನಾವಿಬ್ಬರೂ ಆ ರಾತ್ರಿ ಸ್ಲೋನ್ ಆಸ್ಪತ್ರೆಗೆ ಹೋಗುವಾಗ ದಾರಿಯಲ್ಲಿ ಮೀತಾ ಲೋಲಗೆಕರ್‌ಳ ಸ್ವರಯಂತ್ರವನ್ನು ಜೋಪಾನವಾಗಿಡುವಂತಹ ಪ್ರಯೋಗ ಮಾಡಬಹುದೆ? ಅನ್ನುವುದರ ಬಗ್ಗೆ ಚರ್ಚಿಸಿದೆ. ಇತ್ತೀಚೆಗೆ ನಮ್ಮ ಸಂಸ್ಥೆಯಲ್ಲಿ ರಕ್ತದ ಜೀವಕೋಶಗಳನ್ನು ಪ್ರಯೋಗಾಲಯದಲ್ಲಿ ತಯಾರಿಸುವ ಸಂಶೋಧನೆ ನಡೆದಿದೆ. ಕೃತಕವಾಗಿ ರಕ್ತದ ಜೀವಕೋಶಗಳನ್ನು ತಯಾರಿಸುವಾಗ ರಕ್ತದ ಮೂಲ ಜೀವಕೋಶಗಳನ್ನು ಬದುಕಿಸಿ ಒಂದು ಹನಿಯಿಂದ ಅದರಲ್ಲಿರುವ ಒಂದು ಬಾಟಲಿಯಷ್ಟು ರಕ್ತವನ್ನು ತಯಾರಿಸಬಹುದೇ ಎನ್ನುವ ಪ್ರಯೋಗಗಳು ನಡೆದಿವೆ. ಅದರಲ್ಲಿ ಯಶಸ್ಸು ಕೂಡ ಸಿಗುತ್ತಿದೆ. ಸ್ಲೋನ್ ಆಸ್ಪತ್ರೆಗೆ ಹೋಗಿ ಅಲ್ಲಿಯ ವೈದ್ಯರನ್ನು ಭೇಟಿಯಾಗಿ ಅವರಿಗೆ ಪರಿಸ್ಥಿತಿಯನ್ನು